UASB
LIBRARY
Newspaper Clippings
Pg .1 Thursday 30-09-2021 Jai Kisan



ಬೆಂ.ಕೃಷಿ ವಿವಿ ವಿದ್ಯಾರ್ಥಿಗಳು ಪ್ರಥಮ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಸ್ನಾತಕೋತ್ತರ ವಿದ್ಯಾರ್ಥಿಗಳು ಐಸಿಎಆರ್, ಜೆಆರ್‌ಎಫ್, ಎಸ್‌ಆರ್‌ಎಫ್ 2020-21ರ ಸಾಲಿನ ಪರೀಕ್ಷೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದ್ದಾರೆ. ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪ್ರತಿ ವರ್ಷ ಅಖಿಲ ಭಾರತ ಮಟ್ಟದಲ್ಲಿ ಕೃಷಿ ವಿಜ್ಞಾನಗಳು, ತೋಟಗಾರಿಕೆ, ಇಂಜಿನಿಯರಿಂಗ್, ತಂತ್ರಜ್ಞಾನ ಹಾಗೂ ಪಶು ವೈದ್ಯಕೀಯ ವಿಭಾಗಗಳಲ್ಲಿ ಫೆಲೋಷಿಪ್‌ಗೆ (ಜೆಆರ್‌ಎಫ್ /ಎಸ್‌ಆರ್‌ಎಫ್) ಪರೀಕ್ಷೆ ನಡೆಸುತ್ತದೆ. 60 ಕೃಷಿ ವಿವಿಗಳು, 3 ಕೇಂದ್ರೀಯ ಮತ್ತು 4 ಡೀಮ್ ಕೃಷಿ ವಿವಿಗಳ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ 38 ವಿದ್ಯಾರ್ಥಿಗಳು 'ಕೃಷಿ ವಿಜ್ಞಾನಗಳು' ವಿಭಾಗದಲ್ಲಿ ಹಾಗೂ 10 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದ್ದಾರೆ. ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಬೆಂಗಳೂರಿನ ಕೃಷಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರಪ್ರಸಾದ್ ಅವರಿಗೆ ದೆಹಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕಾರ್ಯದರ್ಶಿ (ಡೇರ್) ಮತ್ತು ಮಹಾ ನಿರ್ದೇಶಕ ಡಾ. ತ್ರಿಲೋಚನ ಮೊಹಪಾತ್ರ ಪ್ರಶಸ್ತಿ ನೀಡಿದರು.

» ಐಸಿಎಆರ್, ಜೆಆರ್‌ಎಫ್, ಎಸ್‌ಆರ್ ಎಫ್ ಪರೀಕ್ಷೆ

30-09-2021 Vv Pg 5A

ಕೃಷಿ ವಿವಿ ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ಸಾಧನೆ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳು ಐಸಿಎಆರ್, ಜೆಆರ್‌ಎಫ್, ಎಸ್‌ಆರ್‌ಎಫ್ 2020-21ರ ಸಾಲಿನ ಪರೀಕ್ಷೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದ್ದಾರೆ.

ದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್, ಪ್ರತಿ ವರ್ಷ ಅಖಿಲ ಭಾರತ ಮಟ್ಟದಲ್ಲಿ ಕೃಷಿ ವಿಜ್ಞಾನಗಳು, ತೋಟಗಾರಿಕೆ, ಇಂಜಿನಿಯರಿಂಗ್, ತಂತ್ರಜ್ಞಾನ ಹಾಗೂ ಪಶು ವೈದ್ಯಕೀಯ ನಾಲ್ಕು ವಿಭಾಗಗಳಲ್ಲಿ ಫೆಲೋಶಿಪ್ (ಜೆಆರ್ ಎಫ್ /ಎಸ್‌ಆರ್‌ಎಫ್)ಗೆ ಪರೀಕ್ಷೆಗಳನ್ನು ನಡೆಸುತ್ತದೆ. 2020-21ನೇ ಸಾಲಿನಲ್ಲಿ ರಾಷ್ಟ್ರದ 60 ಕೃಷಿ ವಿಶ್ವವಿದ್ಯಾನಿಲಯಗಳು, 3 ಕೇಂದ್ರೀಯ ಮತ್ತು 4 ಡೀಮ್ ಕೃಷಿ ವಿವಿಗಳ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ 38 ವಿದ್ಯಾರ್ಥಿಗಳು ಕೃಷಿ ವಿಜ್ಞಾನಗಳು ವಿಭಾಗದಲ್ಲಿ ಹಾಗೂ 10 ವಿದ್ಯಾರ್ಥಿಗಳು ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದ್ದಾರೆ. ಈ ಮೂಲಕ ಐಸಿಎಆರ್- ಜೆಆರ್‌ಎಫ್ / ಎಸ್‌ಆರ್‌ಎಫ್ 2020-21 (ಸ್ನಾತಕೋತ್ತರ)ರ ಸಾಲಿನ ಪರೀಕ್ಷೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂದು ಪ್ರಕಟಣೆ ತಿಳಿಸಿದೆ. ದೆಹಲಿಯಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂದಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್ ಅವರಿಗೆ ದೆಹಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕಾರ್ಯದರ್ಶಿ (ಡೇರ್) ಮತ್ತು ಮಹಾ ನಿರ್ದೇಶಕ ಡಾ.ತ್ರಿಲೋಚನ ಮೊಹಪಾತ್ರ ಪ್ರಶಸ್ತಿ ನೀಡಿ ಗೌರವಿಸಿದರು.

ಕೃಷಿ ಸಂಶೋಧನೆ ಹೆಚ್ಚಲಿ

ಹವಾಮಾನ ಬದಲಾವಣೆ ಎಂಬುದು ಇಂದಿನ ದಿನಮಾನದಲ್ಲಿ ಇಡೀ ವಿಶ್ವವನ್ನು ಬೇರೆ ಬೇರೆ ಬಗೆಯಲ್ಲಿ ಕಾಡುತ್ತಿದೆ. ತಾಪಮಾನ ಏರುವುದರಿಂದ ಆಗಬಹುದಾದ ಅಪಾಯಗಳ ಬಗ್ಗೆ ಈಗಾಗಲೇ ವಿಜ್ಞಾನಿಗಳು, ಪರಿಸರ ತಜ್ಞರು ಎಚ್ಚರಿಕೆಯ ಕರೆಗಂಟೆ ಬಾರಿಸಿದ್ದಾರೆ. ವಿಶೇಷವಾಗಿ ತಾಪಮಾನ ಎರಡು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿದರೆ ಅದರಿಂದ ಸಮುದ್ರ ಮಟ್ಟ ಹೆಚ್ಚಿ ಏನೇನು ಪರಿಣಾಮಗಳು ಆಗಬಹುದು ಎಂಬ ಬಗ್ಗೆ ತಜ್ಞರು ವಿವರವಾಗಿ ತೆರೆದಿಟ್ಟಿದ್ದಾರೆ. ಹೀಗಾಗಿಯೇ ಭೂಮಿಯ ತಾಪಮಾನ ಇನ್ನಷ್ಟು ಹೆಚ್ಚದಂತೆ ನೋಡಿಕೊಳ್ಳುವ ಸಲುವಾಗಿ ಜಾಗತಿಕ ದೇಶಗಳು ಪ್ಯಾರಿಸ್ ಒಡಂಬಡಿಕೆ ಮಾಡಿಕೊಂಡಿವೆ. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದಾಗ ಅಮೆರಿಕವನ್ನು ಈ ಒಪ್ಪಂದದಿಂದ ಹೊರಗೆ ತಂದಿದ್ದರು. ಈಗ ಮತ್ತೆ ಅಮೆರಿಕ ಒಪ್ಪಂದದ ವ್ಯಾಪ್ತಿಗೆ ಬರುವುದಾಗಿ ಹೇಳಿದೆ. ಭೂಮಿಯ ತಾಪಮಾನ ಹೆಚ್ಚದಂತೆ



ಹವಾಮಾನ ಬದಲಾವಣೆ ಪರಿಣಾಮ ಎದುರಿಸಬೇಕು

ನೋಡಿಕೊಳ್ಳುವ ಜವಾಬ್ದಾರಿ ಎಲ್ಲ ದೇಶಗಳು ಮತ್ತು ಎಲ್ಲ ನಾಗರಿಕರ ಮೇಲೂ ಇದೆ. ಏಕೆಂದರೆ ಸಾಮೂಹಿಕ ಪ್ರಯತ್ನದಿಂದ ಮಾತ್ರ ಇದನ್ನು ಸಾಧಿಸಬಹುದೆ ಹೊರತು ವೈಯಕ್ತಿಕ ಪ್ರಯತ್ನಗಳ ಪರಿಣಾಮ ತುಂಬ ಸೀಮಿತ. ಕೃಷಿ ರಂಗದ ಮೇಲೂ ಹವಾಮಾನ ಬದಲಾವಣೆ ಪರಿಣಾಮ ಆಗಿಯೇ ಆಗುತ್ತದೆ. ಅಕಾಲಿಕ ಮಳೆ, ಅತಿವೃಷ್ಟಿ ಅಥವಾ ಅನಾವೃಷ್ಟಿ, ಪ್ರವಾಹದಂತಹ ಸನ್ನಿವೇಶಗಳು, ಹೊಸ ಹೊಸ ರೋಗ ಸಾಧ್ಯತೆ...ಹೀಗೆ ಕೃಷಿ ರಂಗ ಕೂಡಾ ಈ ವಿಷವರ್ತುಲದಿಂದ ಹೊರಗಿರಲು ಸಾಧ್ಯವಿಲ್ಲ. ಹೀಗಾಗಿ ಈ ಅಪಾಯವನ್ನು ಊಹಿಸಿ ಸಂಭಾವ್ಯ ಪರಿಹಾರೋಪಾಯಗಳನ್ನು ಹುಡುಕುತ್ತಲೇ ಇರಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಿರಂತರವಾಗಿ ಸಂಶೋಧನೆಗಳು-ಅಧ್ಯಯನಗಳು ನಡೆಯಬೇಕಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಂಗಳವಾರ 35 ಹೊಸ ತಳಿಗಳನ್ನು ಬಿಡುಗಡೆ ಮಾಡಿರುವುದು ಈ ದಿಕ್ಕಿನಲ್ಲಿನ ಒಂದು ಹೆಜ್ಜೆ ಎಂದು ಹೇಳಬಹುದು. ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಈ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಇವು ತಾಪಮಾನ ಬದಲಾವಣೆ ಮತ್ತು ಅಪೌಷ್ಟಿಕತೆಯ ಉಭಯ ಸವಾಲುಗಳನ್ನು ಎದುರಿಸುವ ಉದ್ದೇಶ ಹೊಂದಿವೆ. ಈ ತಳಿಗಳ ಪರಿಣಾಮಕಾರಿತ್ವ ಮುಂದಿನ ದಿನಗಳಲ್ಲಿ ಗೊತ್ತಾಗಬೇಕಿದೆಯಾದರೂ, ಸರ್ಕಾರಿ ಸಂಸ್ಥೆಯೊಂದು ಈ ಉದ್ದೇಶದತ್ತ ಚಿತ್ತ ನೆಟ್ಟಿದ್ದು ಗಮನಾರ್ಹ. ಈಗ ಕೃಷಿ ಉದ್ಯಮದಲ್ಲಿ ಖಾಸಗಿ ಭಾಗವಹಿಸುವಿಕೆ ಬಹಳ ದೊಡ್ಡದಿದ್ದು, ಅವರೂ ಈ ಬಗ್ಗೆ ಉತ್ಸಾಹ ತೋರಬೇಕಿದೆ. ನಮ್ಮಲ್ಲಿ ರೈತರು ಸಾಂಪ್ರದಾಯಿಕ ವಿಧಾನದಲ್ಲಿ ಬೆಳೆ ರಕ್ಷಣೆಯ ಹಲವು ಮಾಹಿತಿಗಳನ್ನು ಹೊಂದಿದ್ದಾರೆ. ಅಲ್ಲದೆ, ಅನೇಕ ವಿಶಿಷ್ಟ ತಳಿಗಳು ಕೂಡ ಅವರಿಗೆ ಗೊತ್ತಿವೆ. ಈಗಿನ ಕಾಲದ ಅಗತ್ಯಕ್ಕೆ ತಕ್ಕಂತೆ ಆ ಜ್ಞಾನವನ್ನು ಕಾಪಿಟ್ಟುಕೊಂಡು, ಹೆಚ್ಚು ಪಸರಿಸಬೇಕಾಗಿದೆ. ಕೃಷಿ ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹಾಲಿ ಜಾಗತೀಕರಣದ ಸವಾಲುಗಳನ್ನು ರೈತರು ಎದುರಿಸುವಂತಾಗುವ ನಿಟ್ಟಿನಲ್ಲಿ ಸಂಶೋಧನೆಗೆ ಹೆಚ್ಚು ಒತ್ತು ಕೊಡಬೇಕಿದೆ. ಅಂಥ ಅವಿಷ್ಕಾರಗಳು ಆಕಾಡೆಮಿಕ್ ಹೆಗ್ಗಳಿಕೆಗೆ ಮಾತ್ರ ಸೀಮಿತವಾಗದೆ, ರೈತರ ಹೊಲದಲ್ಲಿ ಮತ್ತು ಅವರ ಬದುಕಿನಲ್ಲಿ ಅದರ ಪರಿಣಾಮ ಗೋಚರಿಸಬೇಕು. ಅಂದಾಗ ಕೃಷಿಗೆ ವಿಮುಖರಾಗುವವರ ಸಂಖ್ಯೆ ತಗ್ಗುತ್ತದೆ; ಕೃಷಿ ಆಸಕ್ತಿ ಹೆಚ್ಚುತ್ತದೆ. ಆದರಲ್ಲೂ ಕರೊನೊತ್ತರ ಕಾಲದಲ್ಲಿ ಇತರ ರಂಗಗಳಂತೆ ಕೃಷಿ ಕೂಡ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿರುವುದನ್ನು ಮರೆಯುವಂತಿಲ್ಲ...

30-09-2021 Vv Pg 08

30-09-2021 Uv Pg 11

"Life is a gift. Wake up every day & realize that"

ಐಸಿಎಆರ್ ಪರೀಕ್ಷೆಯಲ್ಲಿ ಬೆಂಗಳೂರು ಕೃಷಿ ವಿವಿ ವಿದ್ಯಾರ್ಥಿಗಳು ಪ್ರಥಮ

ಬೆಂಗಳೂರು: ಬೆಂಗಳೂರು ಕೃಷಿ ವಿವಿಯ ಸ್ನಾತಕೋತ್ತರ ವಿದ್ಯಾರ್ಥಿಗಳು ಐಸಿಎಆರ್-ಜೆಆರ್ಎಫ್/ಎಸ್ಆರ್ಎಫ್ 2020-21ನೇ ಸಾಲಿನ ಪರೀಕ್ಷೆಯಲ್ಲಿ ದೇಶದಲ್ಲೇ ಪ್ರಥಮ ಸ್ಥಾನ ಗಳಿಸಿದ್ದಾರೆ.

ಹೊಸದಿಲ್ಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್, ಪ್ರತಿ ವರ್ಷ ಅಖಿಲ ಭಾರತ ಮಟ್ಟದಲ್ಲಿ ಕೃಷಿ ವಿಜ್ಞಾನಗಳು, ತೋಟಗಾರಿಕೆ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಹಾಗೂ ಪಶು ವೈದ್ಯ ನಾಲ್ಕು ವಿಭಾಗಗಳಲ್ಲಿ ಕಿರಿಯ ಸಂಶೋಧನಾ ಫೆಲೋಷಿಪ್‌ಗೆ ಪರೀಕ್ಷೆಗಳನ್ನು ನಡೆಸುತ್ತಿದೆ. ಇದರಲ್ಲಿ ವಿವಿಯ 48 ವಿದ್ಯಾರ್ಥಿಗಳು ಪರೀಕ್ಷೆ ಬರೆದು ವಿವಿಗೆ ಪ್ರಥಮ ಸ್ಥಾನ ತಂದುಕೊಟ್ಟಿದ್ದಾರೆ.

2020-21ನೇ ಸಾಲಿನಲ್ಲಿ ರಾಷ್ಟ್ರದ 60 ಕೃಷಿ ವಿವಿಗಳು, ಮೂರು ಕೇಂದ್ರೀಯ ಮತ್ತು ನಾಲ್ಕು ಡೀಮ್ಡ್ ಕೃಷಿ ವಿವಿಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ ಬೆಂಗಳೂರು ಕೃಷಿ ವಿವಿ, ಕೃಷಿ ವಿಜ್ಞಾನಗಳ ವಿಭಾಗದ 38 ವಿದ್ಯಾರ್ಥಿಗಳು ಮತ್ತು ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗದ 10



ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಐಸಿಎಆರ್-ಜೆಆರ್ಎಫ್/ಎಸ್ಆರ್ಎಫ್ 2020-21(ಸ್ನಾತಕೋತ್ತರ)ನೇ ಸಾಲಿನ ಪರೀಕ್ಷೆಯಲ್ಲಿ ಬೆಂಗಳೂರು ಕೃಷಿ ವಿವಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂದು ಪ್ರಕಟಣೆ ತಿಳಿಸಿದೆ. ಹೊಸದಿಲ್ಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೃಷಿ ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಅವರು ಹೊಸದಿಲ್ಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾ ನಿರ್ದೇಶಕ ಡಾ. ತ್ರಿಲೋಚನಾ ಮಹಾಪಾತ್ರ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.


ಕೃಷಿ ವಿವಿಯಿಂದ ಬೇಕರಿ ತರಬೇತಿ ಆಯೋಜನೆ

30-09-2021
Vk Pg 08

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಕರಿ ತರಬೇತಿ ಕೇಂದ್ರವು ಬೇಕರಿ ಉದ್ದಿಮೆದಾರರು ಹಾಗೂ ಗೃಹಿಣಿಯರಿಗಾಗಿ ಅಕ್ಟೋಬರ್ 4ರಿಂದ ನಾಲ್ಕು ವಾರ ಬೇಕರಿ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಬ್ರೆಡ್, ಬನ್, ಪಫ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತು, ರೋಲ್ಸ್‌ಗಳು ಸೇರಿದಂತೆ ಬೇಕರಿಯ ಆಕರ್ಷಕ ಪದಾರ್ಥಗಳ ತಯಾರಿಸುವಿಕೆ ಕುರಿತು ತರಬೇತಿ ನೀಡಲಿದೆ. ಅಭ್ಯರ್ಥಿಗಳು ತಾವೇ ಸ್ವತಃ ಪದಾರ್ಥ ತಯಾರಿಸುವ ಮೂಲಕ ಕಲಿಯಲು ಇಲ್ಲಿ ಅವಕಾಶವಿದೆ. ದೂ. 08023513370ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

30-09-2021
Kp Pg 08

ಪೋಷಕಾಂಶಗಳ ಕುರಿತು ಅರಿವು



ರಾಮನಗರ: ಜಿಲ್ಲಾದ್ಯಂತ ಪೋಷಣ ಅಭಿಯಾನ ಮಾಸಾಚರಣೆಯನ್ನು ಆಚರಿಸಲಾಗುತ್ತಿದ್ದು ಮನುಷ್ಯನ ಆರೋಗ್ಯ ವೃದ್ಧಿಗೆ ಪೋಷಕಾಂಶಗಳ ಮಹತ್ವ ಕುರಿತು ಅರಿವು ಮೂಡಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ ಎಂದು ವೈದ್ಯಾಧಿಕಾರಿ ಡಾ.ರಾಘವೇಂದ್ರ ತಿಳಿಸಿದರು.

ರಾಮನಗರ ಜಿಲ್ಲಾ ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ಸಂಯುಕ್ತಾಶ್ರಯದಲ್ಲಿ ಬಿಡದಿ ಸಮುದಾಯ ಆರೋಗ್ಯ ಕೇಂದ್ರದ ವ್ಯಾಪ್ತಿಯ ತಮ್ಮಣ್ಣನದೊಡ್ಡಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಏರ್ಪಡಿಸಿದ್ದ ಪೋಷಣ ಅಭಿಯಾನ ಮಾಸಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಭಿಯಾನದಿಂದ ಮಕ್ಕಳು, ಗರ್ಭಿಣಿ, ಬಾಣಂತಿ, ಹದಿ-ಹರೆಯದವರು, ಅಪೌಷ್ಟಿಕತೆ, ರಕ್ತ ಹೀನತೆ ಮತ್ತು ಇತರೆ ಆರೋಗ್ಯ ಸಮಸ್ಯೆಗಳನ್ನು ನಿಯಂತ್ರಿಸಲುಸಾಧ್ಯವಾಗುತ್ತದೆಎಂದರು. ನಿರೂಪಣಾಧಿಕಾರಿ ಮಂಜುನಾಥ್ ಮಾತನಾಡಿ, ಪೋಷಣ ಅಭಿಯಾನ ಮಾಸಾಚರಣೆ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವಾಗಿದ್ದು ಇದನ್ನು ತಾಯಂದಿರ ಸಭೆ, ಸ್ತ್ರೀ ಶಕ್ತಿ ಸಂಘಗಳ ಸಭೆಯಲ್ಲಿ ನಿರಂತರವಾಗಿ ಮಾಹಿತಿ ನೀಡುವುದರ ಮೂಲಕ ಗ್ರಾಮೀಣ ಜನರಿಗೆ ಅರಿವು ಮೂಡಿಸುವಂತೆ ಸಲಹೆ ನೀಡಿದರು.

ಸೊಪ್ಪು ತರಕಾರಿಯಿಂದ ಆರೋಗ್ಯ ವೃದ್ಧಿ: ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಎಸ್.ಗಂಗಾಧರ್ ಮಾತನಾಡುತ್ತಾ, ಮನುಷ್ಯನ ಜೀವನದಲ್ಲಿ ಪೌಷ್ಟಿಕ ಆಹಾರ ಬಹಳ ಮುಖ್ಯವಾಗಿದ್ದು ಸ್ಥಳೀಯವಾಗಿ ದೊರೆಯುವಂತಹ ಪೌಷ್ಟಿಕ ಆಹಾರ ಪದಾರ್ಥಗಳಾದ ಸಿರಿಧಾನ್ಯ, ಹಸಿರುಸೊಪ್ಪು, ತರಕಾರಿ, ಹಣ್ಣುಗಳು, ಬೇಳೆಕಾಳು, ಮೊಳಕೆಕಾಳು, ಹಾಲು, ಮೊಟ್ಟೆ, ಮೀನು, ಮಾಂಸ ಇವುಗಳನ್ನು ಬಳಸುವುದರಿಂದ ಉತ್ತಮ ಆರೋಗ್ಯ ಜೊತೆಗೆ ರೋಗ ನಿರೋಧಕ ಶಕ್ತಿ ವೃದ್ಧಿಯಾಗಿ ರೋಗಗಳಿಂದ ರಕ್ಷಣೆ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಕೈತೋಟದಲ್ಲಿ ತರಕಾರಿ ಬೆಳೆಯಿರಿ

ಕೃಷಿ ವಿಜ್ಞಾನಿ ಲತಾ ಕುಲಕರ್ಣಿ ಮಾತನಾಡಿ, ಹಿಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೈ ತೋಟಗಳನ್ನು ನಿರ್ಮಿಸಿ ಕೊಟ್ಟಿಗೆ ಗೊಬ್ಬರ ಬಳಸಿ ಹಸಿರು ಸೊಪ್ಪು, ತರಕಾರಿ, ಹಣ್ಣುಗಳು ಬೆಳೆದು ಉಪಯೋಗಿಸುತ್ತಿದ್ದರು. ಅದೇ ಪದ್ಧತಿಯನ್ನು ಅನುಸರಿಸುವುದರಿಂದ ಆರ್ಥಿಕ ಹೊರೆಯಿಲ್ಲದೆ ಮನೆ ಬಳಕೆಗೆ ಬೇಕಾಗುವಂತಹ ಸೊಪ್ಪು, ತರಕಾರಿಗಳನ್ನು ಬೆಳೆದು ಉಪಯೋಗಿಸಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪ ನಿರ್ದೇಶಕ ಸಿ.ವಿ.ರಾಮನ್, ಡಾ.ನಳಿನಾ, ಡಾ.ಶಶಿಕಲಾ, ಡಾ.ಕುಸುಮ, ಸಿಡಿಪಿಓ ಗೀತಾ, ಜಿಲ್ಲಾ ಸಂಯೋಜಕ ಸತೀಶ್, ಮೇಲ್ವಿಚಾರಕಿ ಅಂಭಿಕಾ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ವಿನಯ್ ಕುಮಾರ್, ಚಂದ್ರಶೇಖರ್, ಅರುಣ್ ಕುಮಾರ್, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ನೇತ್ರಾವತಿ, ಮಾಜಿ ಪುರಸಭೆ ಸದಸ್ಯ ಕುಮಾರ್, ಗ್ರಾಮದ ಮುಖಂಡರಾದ ಲೋಕೇಶ್, ಮುಖ್ಯ ಶಿಕ್ಷಕಿ ಶೋಭಾ, ಆರೋಗ್ಯ ಸಿಬ್ಬಂದಿ, ಆಶಾ-ಅಂಗನವಾಡಿ ಕಾರ್ಯಕರ್ತೆಯರು, ಸ್ತ್ರೀಶಕ್ತಿ ಮತ್ತು ಜ್ಞಾನವಿಕಾಸ ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಹಾಜರಿದ್ದರು.



30-09-2021
Hd Pg 10

STATE'S FARMERS SUFFER SHORTAGE OF KEY FERTILISER

EXPRESS NEWS SERVICE
@ Bengaluru

AT a time when farmers should have been equipped with adequate stocks of fertilisers, many parts of the state are reporting a severe shortage of the crucial input. The shortage is mainly of Di-ammonium Phosphate (DAP), which is the much-preferred fertiliser across the country as it contains nitrogen and phosphorus that are the primary nutrients for crops.

Farmers and officials have reported insufficient stocks of DAP at cooperative societies and dealers.

But Agriculture Minister BC Patil on Wednesday said there is no shortage of fertilisers in the state. "There may be a delay of one or two days in getting (the supplies) due to transportation issues. If anyone is creating artificial scarcity, action will be taken against them," he warned. Countering the minister, Kodihalli Chandrashekar, state president, Karnataka Rajya Raita Sangha, said he is getting calls from desperate farmers from many places over fertiliser shortage. "The government may have the stocks, but the farmers are not getting what they want. I will take it up with the government," he added.

Kodagu district requires around 4,500 to 5,000 tonnes of DAP, potash and urea. But there has been an acute shortage for the last two months, as only around 200 tonnes have been supplied so far, said Srinivas SG, a major fertiliser dealer and distributor in the district. To address the shortage, they have supplied farmers with other fertilisers, he added.

In some parts of Srirangapatna in Mandya district, farmers are not getting adequate quantities of DAP and urea for paddy and sugarcane crops. "There has been a shortage over the last few weeks," said Somashekara RA, a farmer from Rampura near Srirangapatna. P4

30-09-2021
Ind Exp Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in